## ಬಹುಮುಖಿ ಚಿಂತನೆಯ ಸಹಾಯದಿಂದ ಅಧ್ಯಯನ

ನಮ್ಮಲ್ಲಿರುವ ಪೂರ್ವಜ್ಞಾನದ ಜೊತೆಗೆ ಹೊಸ ಜ್ಞಾನವನ್ನು ಸೇರಿಸಿಕೊಂಡು ಅಧ್ಯಯನ ನಡೆಸಿದಾಗ ಕಲಿಕಾ ದೃಢೀಕರಣ ಸಶಕ್ತವಾಗುತ್ತದೆ. ಉದಾಹರಣೆಗೆ ನೀವು ಹಿಮಾಲಯದ ಬಗ್ಗೆ ಅಧ್ಯಯನ ಮಾಡುತ್ತೀರಿ ಎಂದುಕೊಳ್ಳಿ. ಆಗ, ಮೊದಲು ಹಿಮಾಲಯ ಇಲ್ಲದಿದ್ದರೆ ದೇಶ ಹೇಗಿರುತ್ತಿತ್ತು ಎಂದು ಯೋಚಿಸಿ. ನಿಮ್ಮ ಚಿಂತನೆ ಬಹುಮುಖಿಯಾಗಿ ಉದ್ದೀಪನಗೊಂಡು ಅನೇಕ ಉತ್ತರಗಳು ಹೊಳೆಯುತ್ತವೆ. ಈಗ ಪಾಠದಲ್ಲಿ ಏನಿದೆ ಎಂದು ಓದಿ. ಆವಾಗ ನಿಮ್ಮಲ್ಲಿರುವ ಜ್ಞಾನಕ್ಕೆ ಹೊಸದು ಸೇರಿಕೊಂಡು ಹಳೆಯದರೊಂದಿಗೆ ಕಲಿಕಾ ದೃಢೀಕರಣವಾಗುತ್ತದೆ.

## ಪ್ರಶ್ನೆಗಳ ರಚನೆ

ಪ್ರಶ್ನೆಪತ್ರಿಕೆಯ ಸ್ವರೂಪವನ್ನು ಅರ್ಥ ಮಾಡಿಕೊಂಡ ನಂತರ ಅದೇ ಮಾದರಿಯಲ್ಲಿ ನೀವು ಅಧ್ಯಯನ ನಡೆಸಿದ ವಿಷಯದಲ್ಲಿ ಕೆಲವು ಪ್ರಶ್ನೆಗಳನ್ನು ನೀವೇ ರಚಿಸಿ. ಆಗ ಯಾವ ಮೂಲೆಯಿಂದ ಹೇಗೆಲ್ಲ ಪ್ರಶ್ನೆ ತೆಗೆಯಬಹುದೆಂದು ನಿಮಗೆ ಗೊತ್ತಾಗುತ್ತದೆ. ಪ್ರಶ್ನೆ ರಚಿಸಿದವನಿಗೆ ಉತ್ತರಿಸುವ ಕೌಶಲ ಸುಲಭವಾಗಿ ಬೆಳೆಯುತ್ತದೆ.

## ಸಂವಾದ

ಅಧ್ಯಯನದಲ್ಲಿ ಸಂವಾದದ್ದು ಬಹುಮಹತ್ವದ ಪಾತ್ರವಿದೆ. ಸಂವಾದ ತಂಡದಲ್ಲಿ 4ರಿಂದ 6 ಮಂದಿ ಸಾಕು. ಬಹಳ ದೊಡ್ಡ ತಂಡವಾಗಬಾರದು. ಹುಡುಗರೂ ಹುಡುಗಿಯರೂ ಇಬ್ಬರೂ ಇದ್ದರೆ ಒಳ್ಳೆಯದು. ಅನಗತ್ಯ ಚರ್ಚೆಗಳು ಬರುವುದಿಲ್ಲ.

ಸಂವಾದವನ್ನು ಹಲವು ವಿಧದಲ್ಲಿ ಮಾಡಬಹುದು.

- ಪ್ರಶ್ನೆಗಳು: ತಂಡದ ಒಬ್ಬ ಸದಸ್ಯ ಪ್ರಶ್ನೆ ಕೇಳಬೇಕು. ಅವನು ಯಾರಿಗೆ ಪ್ರಶ್ನೆ ಕೇಳುತ್ತಾನೊ ಅವನು/ಳು ಉತ್ತರಿಸದಿದ್ದರೆ ನಂತರದವನಿಗೆ ಪ್ರಶ್ನೆ ಪಾಸ್ ಆಗುತ್ತದೆ. ಯಾರೂ ಉತ್ತರಿಸದಿದ್ದರೆ ಪ್ರಶ್ನಿಸಿದವನೇ ಉತ್ತರಿಸಬೇಕು.
- ಕ್ಲಿಷ್ಟ ವಿಷಯಗಳು: ತಂಡದಲ್ಲಿ ಕ್ಲಿಷ್ಟ ವಿಷಯವನ್ನು ಯಾರಾದರೊಬ್ಬರು ಪ್ರಸ್ತಾಪಿಸಬೇಕು. ಗೊತ್ತಿರುವವರು ಅದರ ಬಗ್ಗೆ ಹೇಳಬೇಕು. ನಂತರ ಮತ್ತೊಬ್ಬರು ಕ್ಲಿಷ್ಟ ವಿಷಯವನ್ನು ಪ್ರಸ್ತಾಪಿಸಿ ಚರ್ಚಿಸಬೇಕು. ಯಾರಿಗೂ ಗೊತ್ತಾಗದಿದ್ದರೆ ಅಧ್ಯಾಪಕರ ಬಳಿ ಕೇಳಿ ತಿಳಿಯಬೇಕು.
- ಓದು: ಓದನ್ನು ಕಡಿಮೆ ಮಾಡಿಕೊಳ್ಳಲು ಸಂವಾದ ನಡೆಸಬಹುದು. ನೀವು ಹತ್ತು ಪುಟ ಓದಬೇಕಾಗಿದ್ದು ನಿಮ್ಮ ತಂಡದಲ್ಲಿ ಐದು ಜನರಿದ್ದರೆ ತಲಾ ಎರಡು ಪುಟದಂತೆ ಓದುವಿಕೆಯನ್ನು ಹಂಚಿ. ಅವರವರು ಓದಿದ್ದನ್ನು ಅವರವರು ಹೇಳಲಿ. ಆಗ ಹತ್ತೂ ಪುಟಗಳ ವಿಷಯ ಎಲ್ಲರಿಗೂ ತಿಳಿಯುತ್ತದೆ.



## ವೇಳಾಪಟ್ಟಿ

ಹಲವು ವಿದ್ಯಾರ್ಥಿಗಳು ಅಧ್ಯಯನದ ವೇಳಾಪಟ್ಟಿ ಮಾಡಿಕೊಳ್ಳುತ್ತಾರೆ. ಆದರೆ ಅನುಸರಿಸಲು ಆಗುವುದಿಲ್ಲ. ಏಕೆಂದರೆ ಕೆಲವು ನಿಮಿಷಗಳೂ ನಿರಾಳತೆ ಇಲ್ಲದ ಹಾಗೆ ಕಠಿಣ ವೇಳಾಪಟ್ಟಿ ಮಾಡುತ್ತಾರೆ. ಆದರೆ ದೇಹಕ್ಕೆ ವಿಶ್ರಾಂತಿಯೂ ಅಗತ್ಯವೇ. ಆದ್ದರಿಂದ ಆ ವೇಳಾಪಟ್ಟಿಯನ್ನು ಅನುಸರಿಸಲು ಆಗುವುದಿಲ್ಲ. ಆದ್ದರಿಂದ ಸಾಕಷ್ಟು ವಿಶ್ರಾಂತಿಗೆ ಅವಕಾಶವಿರುವ ಉದಾರವಾದ ವೇಳಾಪಟ್ಟಿ ಮಾಡಿಕೊಳ್ಳಿ. ಅನುಸರಿಸಲು ಆಗುತ್ತದೆ. ನಿಯಮವನ್ನು ಮಾಡಿಕೊಳ್ಳುವಾಗ ಉದಾರವಾದಿಗಳಾಗಿರಬೇಕು. ಅನುಸರಿಸುವಾಗ ಕಠಿಣವಾಗಿ ಅನುಸರಿಸಬೇಕು.